# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 46, ಜೆ.ಸಿ ನಗರ. ಬೆಂಗಳೂರು.

ದಿನಾಂಕ:07-12-2020

ಸಂಖ್ಯೆ: ಸ.ಅ/ವಾ-46/ಪಿ.ಆರ್/ 05 /2020-21

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 05-12-2020 ರಂದು ವಾರ್ಡ್ ನಂ:46 ಜೆ.ಸಿ.ನಗರದ ಸಿಟಿಜನ್ ಪಾರ್ಕ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1. | ಶ್ರೀ.ಎಸ್.ಜಿ.ರವೀಂದ್ರ. ಭಾ.ಸ.ಸೇ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | ಹಾಜರಿ |
| 2. | ಶ್ರೀ ರಂದೀಪ್. ಭಾ.ಆ.ಸೇ. | ವಿಶೇಷ ಆಯುಕ್ತರು (ಘನ ತ್ಯಾಜ್ಯ ನಿರ್ವಹಣೆ) | ಹಾಜರಿ |
| 3. | ಶ್ರೀ.ರಾಜ್‌ಬೀರ್ ಸಿಂಗ್ | ಚೀಫ್ ಮಾರ್ಷಲ್ | ಹಾಜರಿ |
| 4. | ಶ್ರೀ.ಯುವರಾಜ್.ಬಿ | ಸದಸ್ಯ ಕಾರ್ಯದರ್ಶಿ ವಾಡ್ ನಂ: 46 | ಹಾಜರಿ |
| 5. | ಶ್ರೀ.ಗಣೇಶ್.ಕೆ.ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿ |
| 6. | ಡಾ.ಎಸ್.ಶ್ರೀದೇವಿ | ಆರೋಗ್ಯ ವೈಧ್ಯಾದಿಕಾರಿ | ಗೈರು ಹಾಜರಿ |
| 7. | ಶ್ರೀ.ರವೀಂದ್ರ | ಅರಣ್ಯಾಧಿಕಾರಿ | ಗೈರು ಹಾಜರಿ |
| 8. | ಶ್ರೀ.ಹೆಚ್.ಮೂರ್ತಿ | ಕಂದಾಯ ಅಧಿಕಾರಿಗಳು | ಗೈರು ಹಾಜರಿ |
| 9. | ಸುವರ್ಣದೇವಿ.ವೈ.ಬಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿ |
| 10. | ಶ್ರೀ.ಆರ್. ಮನೋಹರ್ | ಬೆಸ್ಕಾಂ. | ಹಾಜರಿ |
| 11. | ಶ್ರೀ.ಟಿ.ಪಿ.ಶಂಕರ್ | ಮೇಜರ್ ರೋಡ್ಸ್ | ಹಾಜರಿ |
| 12. | ಶ್ರೀ.ಹರೀಶ್ | ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ. | ಹಾಜರಿ |

ವಾರ್ಡ್ ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ. ಹೆಚ್.ಜಿ.ರವೀಂದ್ರ, ಭಾ.ಸ.ಸೇ ರವರು ವಿಶೇಷ ಅತಿಥಿಗಳಾದ ಶ್ರೀ.ರಂದೀಪ್ ವಿಶೇಷ ಆಯುಕ್ತರು(ಎಸ್.ಡಬ್ಲ್ಯೂ.ಎಂ) ಮತ್ತು ಶ್ರೀ.ರಾಜ್‌ಬೀರ್ ಸಿಂಗ್ ಚೀಪ್ ಮಾರ್ಷಲ್ ರವನ್ನು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಮತ್ತು ಸಭೆಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

- ಈ ಹಿಂದಿನ ಸಭೆಯಲ್ಲಿ ತಿಮ್ಮಯ್ಯ ಗಾರ್ಡನ್‌ನ 7ನೇ ಅಡ್ಡರಸ್ತೆಯಲ್ಲಿನ ನಿವಾಸಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಪೈಪ್ ಲೈನ್ ಸೋರಿಕೆಯ ಬಗ್ಗೆ ದೂರು ನೀಡಿದ್ದು, ಅದನ್ನು ಪರಿಶೀಲಿಸಿ ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು.
- ಆರ್.ಟಿ ನಗರ 2ನೇ ಬ್ಲಾಕ್, 13ನೇ ಅಡ್ಡರಸ್ತೆಯಲ್ಲಿ ಬೀದಿ ದೀಪ ಇಲ್ಲದಿರುವ ಬಗ್ಗೆ ಸಾರ್ವಜನಿಕರು ದೂರು ನೀಡಿದ್ದು, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದ್ದು, ಬೆಸ್ಕಾಂ ಅಧಿಕಾರಿಗಳು ಬೀದಿ ದೀಪವನ್ನು ಅಳವಡಿಸಿ ಸರಿಪಡಿಸಲಾಗಿದೆ ಎಂದು ತಿಳಿಸಿದರು.
- ವಾರ್ಡ್ ಸಮಿತಿ ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಶ್ರೀ ರವೀಂದ್ರ.ಎಸ್.ಜಿ ರವರು ಮೈಸಿಟಿ ಮೈಬಜೆಟ್ ಎಂಬ ಅಜೆಂಡಾದ ಬಗ್ಗೆ ವಿವರಿಸಿದರು.
- ವಾರ್ಡ್‌ನಲ್ಲಿರುವ ಹಲವು ಬ್ಲಾಕ್‌ಸ್ಪಾಟ್‌ಗಳ ಬಗ್ಗೆ ವಾರ್ಡ್‌ನ ಜನರಿಗೆ ಜಾಗೃತಿ ಮೂಡಿಸಲು ತಿಳಿಸಲಾಯಿತು.

- ವಾರ್ಡ್‌ನಲ್ಲಿನ ಬ್ಲಾಕ್‌ಸ್ಪಾಟ್‌ಗಳಲ್ಲಿ ಸಿ.ಸಿ ಕ್ಯಾಮೆರಗಳನ್ನು ಅಳವಡಿಸಲಾಗಿದ್ದು, ಕ್ಯಾಮೇರಾ ಫುಟೇಜಸ್‌ಗಳನ್ನು ವೀಕ್ಷಿಸಿ ಬ್ಲಾಕ್‌ಸ್ಪಾಟ್‌ಗಳಲ್ಲಿ ಕಸ ಎಸೆಯುವವರಿಗೆ ದಂಡ ವಿಧಿಸಲು ಮಾರ್ಷಲ್ ಮತ್ತು ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
- ವಿಶೇಷ ಆಯುಕ್ತರಾದ ಶ್ರೀ ರಂದೀಪ್ ರವರು ಘನತ್ಯಾಜ್ಯ ನಿರ್ವಹಣೆ ಕಾಯ್ದೆ 2016 ರ ಬಗ್ಗೆ ವಿವರವಾಗಿ ತಿಳಿಸಿದರು.
- ಬಳಕೆದಾರರ ಶುಲ್ಕ (User Fee For SWM) ಎಂಬ ಪರಿಕಲ್ಪನೆಯ ಬಗ್ಗೆ ಶ್ರೀ ರಂದೀಪ್ ರವರು ಸಂಕ್ಷಿಪ್ತವಾಗಿ ವಿವರಿಸಿದರು.
- Concept of Zero waste ಎಂಬ ಪರಿಕಲ್ಪನೆ ಮತ್ತು ವಾರ್ಡ್‌ನಲ್ಲಿ ಅನುಸರಿಸುವ ಬಗ್ಗೆ ಶ್ರೀ ರಂದೀಪ್ ರವರು ವಿವರಿಸಿದರು.
- ವಾರ್ಡ್‌ನಲ್ಲಿ ಡ್ರೈವೇಸ್ಟ್ ಸೆಂಟರ್‌ನ್ನು ಸ್ಥಾಪಿಸಲು ಸೂಕ್ತ ಸ್ಥಳವನ್ನು ನಿಗಧಿಪಡಿಸಲು ತಿಳಿಸಲಾಯಿತು.
- ವಾರ್ಡ್‌ನಲ್ಲಿ ಇರುವಂತಹ Yellow Spot ಗಳನ್ನು ಗುರುತಿಸಿ ಆ ಜಾಗದಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಮೈಸಿಟಿ, ಮೈಬಜೆಟ್ ಅಡಿಯಲ್ಲಿ ಸೂಚಿಸಲಾಯಿತು.
- ವಾರ್ಡ್‌ನ ರ್ಯಾಂಕಿಂಗ್ ಕಡಿಮೆಯಾಗಿದ್ದು, ಕಡಿಮೆಯಾಗಿರುವ ವಾರ್ಡ್ ರ್ಯಾಂಕಿಂಗ್‌ನ್ನು ಹೆಚ್ಚಿಸಲು ಕೈಗೊಳ್ಳುವ ಕ್ರಮಗಳ ಬಗ್ಗೆ ನೋಡಲ್ ಅಧಿಕಾರಿಗಳು ಮತ್ತು ವಿಶೇಷ ಆಯುಕ್ತರು (ಎಸ್.ಡಬ್ಲ್ಯೂ.ಎಂ) ರವರು ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 46, ಜೆ.ಸಿ.ನಗರ

ಸಹಿ/-
ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 46, ಜೆ.ಸಿ ನಗರ

<u>ಪ್ರತಿಯನ್ನು:-</u>

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.